**ಎಮ್.ವಿ.ಸಿ. ನಂಃ 1580/2023**
**ಪಿ.ಡಬ್ಲ್ಯೂಃ1.**

**ದಿನಾಂಕ : 11-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀ . ವಿ.ಆರ್. ಎಮ್. ಎದುರುದಾರ ಪರ ವಕೀಲರಿಂದ :**

ಅಪಘಾತವು 2023 ನೇ ಸಾಲಿನ 7 ತಿಂಗಳ 3 ನೇ ತಾರೀಖನ ಬೆಳಿಗ್ಗಿನ ಜಾವ ಆಗಿದೆ. ಆ ದಿನ ಶಹಾಬಾದನಿಂದ ಜೇವರ್ಗಿಗೆ ಮೋಟಾರ ಸೈಕಲ ನಂಬರ: ಕೆ.ಎ-33-ಇವಿ.3921 ರ ಮೇಲೆ ನಾನು ಮತ್ತು ಮುಜಾಹಿದ್ ಹೊರಟಿದ್ದೇವು. ಸದರಿ ಅಪಘಾತವು ತೊನಸನಹಳ್ಳಿ ಬೀರಲಿಂಗೇಶ್ವರ ದೇವಸ್ಥಾನ ಬಳಿ ಆಗಿದೆ. ಅಪಘಾತ ಆದ ನಂತರ ಮೊದಲು ಸರಕಾರಿ ಆಸ್ಪತ್ರೆ ಶಹಾಬಾದಗೆ ಹೋದೇವು ನಂತರ ಕಲಬುರಗಿ ಮನೂರು ಆಸ್ಪತ್ರೆಗೆ ಹೋದೇವು. ಸರಕಾರಿ ಆಸ್ಪತ್ರೆಯಲ್ಲಿ ಅಪಘಾತವು 12-00 ಗಂಟೆಗೆ ಆಗಿದೆ ಎಂದು ತಿಳಿಸಿದ್ದೇವೆ ಎಂದರೆ ಸರಿ. ಮನೂರು ಆಸ್ಪತ್ರೆಗೆ ಹೋಗುವಾಗ ನಾನು ಪ್ರಜ್ಞೆ ಇರಲಿಲ್ಲಾ. ಆಸ್ಪತ್ರೆಗೆ ನನ್ನ ತಂದೆ ನನ್ನ ಜೊತೆಗೆ ಬಂದಿದ್ದರು, ಪೋಲಿಸರಿಗೆ ನನ್ನ ತಂದೆ ದೂರು ನೀಡಿದ್ದಾರೆ ಎಂದರೆ ಸರಿ. ಅಪಘಾತವು ಹೇಗೆ ಯಾವ ರೀತಿ ಆಯಿತು ಅಂತಾ ನನ್ನ ತಂದೆ ಹೇಳಿದ್ದಾರೆ. ನಿಪಿ-8 ಪ್ರಕಾರ ನಾನು ಸ್ವಂತ ಮೋಟಾರ ಸೈಕಲ ಮೇಲಿಂದ ಬಿದ್ದು ಗಾಯ ಪಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲಾ. ಅಪಘಾತ ಆದ 2 ದಿನಗಳ ನಂತರ ದೂರು ನೀಡಲಾಯಿತು. ನನ್ನ ಜೊತೆಗೆ ಇದ್ದ ಮುಜಾಹಿದ ಪರ್ವೆಜ ವಾಹನ ಮೇಲಿಂದ ಬಿದ್ದಾನೆ ಎಂದರೆ ಸರಿ, ಆತನಿಗೆ ಸ್ವಲ್ಪ ಗಾಯಗಳು ಆಗಿವೆ. ಮುಜಾಹಿದ ಇತನೀಗೂ ಸಹ ಗಾಯಗಳು ಆಗಿವೆ ಎಂದು ತಿಳಿಸಿರುತ್ತಾನೆ, ಆತನಿಗೂ ಶಹಾಬಾದ ಆಸ್ಪತ್ರೆಗೆ ದಾಖಲಿಸಲಾಯಿತು. ಮುಜಾಹಿದ ಪರ್ವೇಜನಿಗೆ ಯಾವ ಆಸ್ಪತ್ರೆಗೆ ಮತ್ತು ಎಷ್ಟು ದಿನಗಳವರೆಗೆ ತೋರಿಸಲಾಯಿತು ಎಂದು ದಾಖಲೆಗಳನ್ನು ಸಲ್ಲಿಸಿಲ್ಲಾ. ನಿಪಿ-7 ಅಂತಿಮ ವರದಿಯಲ್ಲಿ ಮುಜಾಹಿದ ಇತನಿಗೆ ಗಾಯ ಆಗಿದೆ ಅಂತಾ ವರದಿಯಲ್ಲಿ ಇಲ್ಲಾ ಎಂದರೆ ಸರಿಯಲ್ಲ . ಸದರಿ ಅಪಘಾತ ದಿನದಂದು ನಾನು ಸ್ವಂತ ವಾಹನ ಚಲಾಯಿಸಿ ಬೈಕ ಮೇಲಿಂದ ಬಿದ್ದು 2ದಿನಗಳ ನಂತರ ನಾನು ನಮ್ಮ ತಂದೆ ಸೇರಿ ಮುಜಾಹಿದ ವಾಹನ ಚಲಾಯಿಸುತ್ತಿದ್ದ ಅಂತ ಪರಿಹಾರ ಪಡೆಯಲು ಸುಳ್ಳು ದೂರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ . ಮನೂರು ಆಸ್ಪತ್ರೆ ಬಿಟ್ಟು ಬೇರೆ ಆಸ್ಪತ್ರೆಯಲ್ಲಿ ಪಡೆದಿಲ್ಲಾ,

ಇನ್ನುವರೆಗೆ ಚಿಕಿತ್ಸೆ ಪಡೆಯುತ್ತಿದ್ದೇನೆ ಎಂದು ದಾಖಲೆ ಸಲ್ಲಿಸಿಲ್ಲಾ. ಹೆಚ್ಚಿನ ಪರಿಹಾರ ಪಡೆಯಲು ವೈದ್ಯರ ಜೊತೆ ಮಿಲಾಫೆ ಆಗಿ ಹೆಚ್ಚಿನ ಅಂಗ ನೂನ್ಯತೆ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ . ನಾನು ಆಸ್ಪತ್ರೆಯಲ್ಲಿ 11 ದಿನ ದಾಖಲು ಆಗಿ ರೂ. 3,50,000/- ಖರ್ಚು ಮಾಡಿದ್ದೇನೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ, ನನ್ನ ಮುಂದುವರೆದ ಚಿಕಿತ್ಸೆಗಾಗಿ ರೂ. 2,50,000/- ಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನನ್ನ ಜನ್ಮ ದಿ: 17-05-1999 . ಅಪಘಾತ ಆದಾಗ ನನಗೆ 24 ವರ್ಷ ಇತ್ತು, ನಾನು ಬಳಿ ವ್ಯಾಪಾರ ಮಾಡುತ್ತಿದ್ದೆ. ಈಗ ಯಾವುದೇ ಕೆಲಸ ಮಾಡುವುದಿಲ್ಲಾ. ಬಳಿ ವ್ಯಾಪಾರ ಮಾಡಿ ರೂ. 25,000/- ಗಳಿಸುತ್ತಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಪರಿಹಾರ ಪಡೆಯಲು ಸುಳ್ಳು ಅರ್ಜಿ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆ : ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**